**ವಿಧಾನ ಪರಿಷತ್ತು**

**ಶೂನ್ಯ ವೇಳೆ**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿ, ಇವರು ಶೂನ್ಯವೇಳೆಯಲ್ಲಿ ಉತ್ತರ ಕನ್ನಡ ಜಿಲ್ಲೆ ಮುಂಡಗೋಡು ತಾಲ್ಲೂಕಿನ ಮೈನಳ್ಳಿ ಗ್ರಾಮ ಪಂಚಾಯತದ ಸುಮಾರು 12 ಹಳ್ಳಿಗಳಲ್ಲಿ ಅಂದಾಜು ಹತ್ತು ಸಾವಿರ ಜನಸಂಖ್ಯೆಯನ್ನು ಹೊಂದಿದ್ದು, ಮೂರು ಸಾವಿರ ಮನೆಗಳಿವೆ. ಈ ಭಾಗದಲ್ಲಿ ಹೆಚ್ಚಿನದಾಗಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಮತ್ತು ಅರಣ್ಯ ಅವಲಂಬಿತ, ಭೂ ರಹಿತ ಬಡವ ಹಾಗೂ ಹಿಂದುಳಿದ ಜನಾಂಗದವರಿದ್ದಾರೆ. ಆದರೆ ಇವರಿಗೆಲ್ಲಾ ಅವಶ್ಯವಿರುವ ಯಾವುದೇ ಸರಕಾರಿ ದವಾಖಾನೆ ಈ ಊರಿನಲ್ಲಿ ಇರುವುದಿಲ್ಲ. ಆದ್ದರಿಂದ ಅನೇಕ ಗಂಭೀರ ಕಾಯಿಲೆಗಳು ಬಂದಾಗ ಮತ್ತು ವಿಷಯುಕ್ತ ಪ್ರಾಣಿ, ಕೀಟಗಳ ಕಡಿತಕ್ಕೊಳಗಾದವರಿಗೆ ಮತ್ತು ಕಾಡು ಪ್ರಾಣಿಗಳಿಂದ ದಾಳಿಗೊಳಗಾದವರಿಗೆ ಕನಿಷ್ಠ ಪ್ರಥಮ ಚಿಕಿತ್ಸೆಯೂ ಸಿಗದೇ ಸಾವನಪ್ಪಿದ ಘಟನೆಗಳು ನಡೆದಿರುತ್ತವೆ. ಇವರೆಲ್ಲಾ ಶುದ್ಧ ನೀರು, ಪೌಷ್ಠಿಕ ಆಹಾರ ಮತ್ತು ಚಿಕಿತ್ಸೆಯ ಕೊರತೆಯಿಂದ ಬಳಲುತ್ತಿದ್ದಾರೆ. ದಟ್ಟ ಕಾಡಿನ ಮಧ್ಯ ವಾಸಿಸುವ ಗ್ರಾಮಸ್ಥರಿಗೆ, ದೂರದ ತಾಲೂಕಾಸ್ಪತ್ರೆಗೆ ಆಗಮಿಸಿ ಚಿಕಿತ್ಸೆ ಪಡೆಯುವುದು ತುಂಬ ದುಸ್ತರವಾಗಿದೆ. ಅಲ್ಲದೆ ಮೈನಳ್ಳಿಯ ಗ್ರಾಮದಲ್ಲಿ ಆಸ್ಪತ್ರೆ ಕಟ್ಟಲು ಬೇಕಾಗುವ ಭೂಮಿಯನ್ನು ಸಹ ನೀಡಲು ಗ್ರಾಮಸ್ಥರು ತಯಾರಿದ್ದು, ತಮಗೆಲ್ಲ ಆರೋಗ್ಯ ದೃಷ್ಟಿಯಿಂದ ತಕ್ಷಣ ಆಸ್ಪತ್ರೆಯನ್ನು ಸರಕಾರದಿಂದ ಮಂಜೂರು ಮಾಡಲು ಸೂಕ್ತ ಕ್ರಮ ವಹಿಸಲು, ಗ್ರಾಮಸ್ಥರು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಹೀಗಾಗಿ ಸದರಿ ಪಂಚಾಯತಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಥಮಾದ್ಯತೆಯ ಮೇರೆಗೆ ಮಂಜೂರುಗೊಳಿಸಬೇಕೆಂದು ಪ್ರಸ್ತಾಪಿಸಿರುವ ಕುರಿತು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

IPHS 2022ರ ಮಾರ್ಗಸೂಚಿಯನ್ವಯ ಸಮತಟ್ಟು ಪ್ರದೇಶದಲ್ಲಿ 30,000 ಜನಸಂಖ್ಯೆಗೆ ಮತ್ತು ಗುಡ್ಡಗಾಡು ಹಾಗೂ ಗಿರಿಜನ ಪ್ರದೇಶದಲ್ಲಿ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಅವಕಾಶವಿದೆ

ರಾಜ್ಯದಲ್ಲಿ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು 2027ರ ಯೋಜಿತ ಜನಸಂಖ್ಯೆಯನ್ವಯ ಹಾಗೂ ಆರೋಗ್ಯ ಕೇಂದ್ರ ಮಂಜೂರು ಮಾಡಬೇಕಾದ ಸ್ಥಳದ ಸುತ್ತಲು ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳ ವಿವರ ಹಾಗೂ ಕ್ರಮಿಸಲು ಬೇಕಾದ ಅವಧಿಯನ್ನು ಪರಿಗಣಿಸಿ ಕ್ರಮ ವಹಿಸಲು ಆರ್ಥಿಕ ಇಲಾಖೆಯು ತಿಳಿಸಿದೆ.

ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರಿಂದ ಸ್ವೀಕೃತವಾದ ಮಾಹಿತಿಯಲ್ಲಿ 2027ರ ಮುಂಡಗೋಡು ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ:-65,152 ಎಂದು ಅಂದಾಜಿಸಲಾಗಿದೆ. ಇದರನ್ವಯ 3 ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಅವಕಾಶವಿದ್ದು, ಪ್ರಸ್ತುತ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ 1 ಪ್ರಾಥಮಿಕ ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸುತ್ತಿರುವುದರಿಂದ ಮೈನಳ್ಳಿ ಗ್ರಾಮದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಮೈನಳ್ಳಿ ಗ್ರಾಮದಿಂದ ಹತ್ತಿರದಲ್ಲಿ ಮುಂಡಗೋಡ ತಾಲ್ಲೂಕು ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು, ಸುತ್ತ-ಮುತ್ತಲಿನ ಗ್ರಾಮದ ಜನರಿಗೆ ತಜ್ಞ ವೈದ್ಯರ ಸೇವೆಯನ್ನು ನೀಡಲಾಗುತ್ತಿದೆ. ಸುತ್ತಮುತ್ತ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.

**ಆಕುಕ 73 ಎಸ್ ಎಂ ಎಂ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

# ಅನುಬಂಧ

| Distance from MAINALLI Village to Health Facilities | | | | | | | |
|---|---|---|---|---|---|---|---|
| Sl.no | District Name | Taluk Name | Village Name | Facility Name | Type | Bed count | Distance in KM |
| 1 | Uttara Kannada | Mundgod | MAINLLI VILLAGE | FRU MUNGOD TALUK HOSPITAL | TLH | 100 | 11 |
| 2 | Uttara Kannada | Mundgod | | HUNGUNDA (24X7) | PHC 24X7 | 6 | 16 |
| 3 | Dharwad | Kalghatgi | | BAMMIGATTI 24X7 | PHC 24X7 | 6 | 18 |
| 4 | Uttara Kannada | Mundgod | | ARSHINAGERI | PHC | 6 | 22 |
| 5 | Dharwad | Kalghatgi | | MUKKAL (24X7) | PHC 24X7 | 6 | 23 |
| 6 | Haveri | Shiggaon | | KONANAKERI | PHC | 6 | 24 |
| 7 | Uttara Kannada | Mundgod | | KATUR (24X7) | PHC 24X7 | 6 | 24 |
| 8 | Haveri | Shiggaon | | CHANDAPUR (24X7) | PHC 24X7 | 6 | 27 |



File No. HFW-SMM/73/2025-US-HLTH1-HEALTH AND FAMILY WELFARE SEC (Computer No. 1720538)
Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 18/03/2025 09:33 AM